ನಿಮ್ಮ ಸೆಂಟಿಮೆಂಟು ಮನ್ಯಾಗ ಇಡುರಿ. ಅವನು ಬದಲಾಗದು ಬ್ಯಾಡನು. ಸುಮ್ಮನ ನಮ್ಮ ಹಿಂದ ಬರ್ರಿ. ನಾವು ದಿನಾ ಹತ್ತು ಹಳ್ಳಿ ತಿರುಗಬೇಕು. ಎಂಟು ದಿನದಾಗ ಎಂಬತ್ತು ಹಳ್ಳಿ ರೀಚ್ ಆಗಬೇಕು. ಈಗಾಗಲೆ ಪ್ರತಿ ಹಳ್ಳಿಗೂ ದುಡ್ಡು ಮುಟ್ಯಾದ. ಎಲ್ಲ ವ್ಯವಸ್ಥಾ ಆಗ್ಯಾದ. ನಾನು ಮುಖ ತೋರಿಸಬೇಕು ಅಷ್ಟೆ. ನಮ್ಮ ಜತಿಗಿ ನೀವು ಇರಬೇಕು' ಎಂದು ಎಲ್ಲರಿಗೆ ಹೊರಡಲು ಹೇಳಿದ. ಮೂಕ ಎತ್ತಿನಂತೆ ಶಾಂತಗೌಡ ಅವರ ಹಿಂದ ಹೊರಟ.

ಕೇರಿಯಲ್ಲಿ ವೇದಿಕೆ ಸಿದ್ಧವಾಗಿತ್ತು. ದೊಡ್ಡ ಪೆಂಡಾಲು ಹಾಕಿದ್ದರು. ನೂರಾರು ಜನ ಕುಳಿತಿದ್ದರು. ಯಾರೂ ಕೆಲಸಕ್ಕೆ ಹೋಗಿರಲಿಲ್ಲ. ಎಲ್ಲರಿಗೂ ಐದುನೂರು ಕೊಟ್ಟಿದ್ದರು. ಬಂದವರೇ ಕೆಂಚನಾದಿಯಾಗಿ ಜನರ ಕಡೆ ಕೈ ಮುಗಿದರು. ಜನರು 'ಹೋ...' ಎಂದು ಕೂಗಿದರು. ಕೇಕೆ ಹಾಕಿ ಶಿಳ್ಳೆ ಹೊಡೆದರು. ಮುಂದಿನ ಸಾಲಿನಲ್ಲಿ ಕುಳಿತರು. ಬೆಳದಿಂಗಳಿನಂಥ ಲಲನೆಯರು ಬಸ್ಸಿಂದ ಇಳಿದು ಸೀದಾ ವೇದಿಕೆಗೆ ಬಂದರು. ಒಂದು ತಾಸು ನೃತ್ಯ ಮಾಡಿದರು. ಜನರು ರೋಮಾಂಚಿತರಾಗಿ ಹುಚ್ಚೆದ್ದು ಕುಣಿದರು. ಲಲನೆಯರು ಹಾಗೆ ಬಸ್ಸಿನಲ್ಲಿ ಹೋಗಿ ಕುಳಿತರು. ಒಬ್ಬ ಬಂದು ವೇದಿಕೆ ಮೇಲೆ ಬಿಳಿ ಪರದೆ ಬಿಟ್ಟ. 'ಜನಗಳೇ... ನಾವು ಸುಮ್ಮನೆ ಭರವಸೆ ಕೊಡುವುದಿಲ್ಲ. ಈಗಾಗಲೇ ನಿಮ್ಮನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂದು ಯೋಜನೆ ತಯಾರಿಸಿದ್ದೇವೆ. ನಮ್ಮ ಪುರುಷೋತ್ತಮ ಸಾಹೇಬರು ಅಮೆರಿಕದಲ್ಲಿ ದೊಡ್ಡ ಸಾಫ್ಟ್‌ವೇರ್ ಎಂಜಿನಿಯರು. ಈಗ ನಿಮ್ಮ ಸೇವೆ ಮಾಡಲು ಬಂದಿರುವರು. ಅವರು ನಿಮ್ಮ ಹಳ್ಳಿಯ ಚಿತ್ರಣವನ್ನೆ ಬದಲಿಸಲಿದ್ದಾರೆ ನೋಡಿ' ಎಂದು ಪರದೆ ಮೇಲೆ ಚಿತ್ರ ತೋರಿಸಿದರು. 'ನಿಮ್ಮ ಕೇರಿಯಲ್ಲಿ ಇಂಗ್ಲಿಷ್ ಮೀಡಿಯಂ ಸ್ಮಾರ್ಟ್ ಶಾಲೆ ಬರುತ್ತೆ. ನಿಮಗೆ ಉಚಿತ ಶಿಕ್ಷಣ. ಆಸ್ಪತ್ರೆ, ಶುದ್ಧ ಕುಡಿಯುವ ನೀರು, ಒಳ್ಳೆಯ ರಸ್ತೆ, ಶಾಪಿಂಗ್ ಮಾಲು, ಪುಟ್ಟ ಕಾರ್ಖಾನೆ, ಸುಂದರ ದೇವಸ್ಥಾನ, ಸಹಜ ಕೃಷಿ, ಕೃಷಿ ಗೋದಾಮು, ಸಹಕಾರಿ ಬ್ಯಾಂಕು' ಎಂದು ಒಂದೊಂದೇ ಚಿತ್ರವನ್ನು ಪರದೆ ಮೇಲೆ ತೋರಿಸಿದರು. ಜನ ಮೂಕವಿಸ್ಮಿತರಾಗಿ ನೋಡಿದರು. 'ಇವೆಲ್ಲವನ್ನು ಸಾಕಾರಗೊಳಿಸುತ್ತೇವೆ. ನಮ್ಮ ಸಾಹೇಬರು ಜಾತಿಭೇದ ಮಾಡುವುದಿಲ್ಲ. ನಿಮಗೆ ಗೊತ್ತಿದೆ. ನಿಮ್ಮ ಕೇರಿಯ ಕೆಂಚನನ್ನು ಮನೆ ಮಗನಂತೆ ಮನೆಯಲ್ಲಿ ಇಟ್ಟುಕೊಂಡು ಸಾಕಿ ಸಲಹಿದ್ದಾರೆ. ಗೌಡರ ಜತಿಗೆ ಕೆಂಚ ಕುಳಿತಿದ್ದಾನೆ. ನಿಮ್ಮೆಲ್ಲರನ್ನು ಕೆಂಚನಂತೆ ಅಭಿವೃದ್ಧಿ ಮಾಡುತ್ತೇವೆ. ನೀವು ನಮ್ಮ ಕೈ ಹಿಡಿಯಬೇಕು' ಎಂದನು. ಪುರುಷೋತ್ತಮ ಕೆಂಚನ ಜೊತೆ ವೇದಿಕೆಯಲ್ಲಿ ಎಲ್ಲರಿಗೂ ಕೈ ಮುಗಿದನು. 'ನಿಮ್ಮ ಮಗ ಉಡಿಯಲ್ಲಿ ಹಾಕಿಕೊಳ್ಳಿರಿ' ಎಂದು ನಗೆ ಬೀರಿದನು.

ಮುಂದಿನ ಹಳ್ಳಿಯೆಡೆಗೆ ಕಾರುಗಳು ಚಲಿಸಿದವು. ಶಾಂತಗೌಡ ಮೂಕರಾಗಿ ಕುಳಿತಿದ್ದರು. ಕೆಂಚ ಶಾಂತಗೌಡರ ಕೈ ಹಿಡಿಕೊಂಡು ಪಿಳಿ ಪಿಳಿ ಕಣ್ಣು ಬಿಡುತಿದ್ದ.

## ಹಳೆಮನೆ ರಾಜಶೇಖರ

ರಾಯಚೂರು ಜಿಲ್ಲೆಯ ನುಗಡೋಣಿಯವರು. ಕಥಾಸ್ಪರ್ಧೆಗಳಲ್ಲಿ ಅವರ ಕತೆಗಳಿಗೆ ಬಹುಮಾನಗಳು ಬಂದಿವೆ. 'ಬಿಸಿಲ ಉಡಿಯ ಕಥೆಗಳು' ಅವರ ಕತೆಗಳ ಸಂಕಲನವಾಗಿದೆ. 'ಮಹಿಳೆ ಮತ್ತು ಸಂಸ್ಕೃತಿ', 'ತಲೆಮಾರುಗಳ ಸಂಕಥನ', 'ಚರಿತ್ರೆ ಮತ್ತು ವಾಸ್ತವ', 'ಪರಿಣಾಮದೊಳಗೆ', 'ನುಡಿ ನಡೆ' – ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ. ಪ್ರಸ್ತುತ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.